ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ 228/2024
ಸಿಡಬ್ಲ್ಯೂ- 4
ಪಿಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜಯಲಕ್ಷ್ಮೀ |
| ಗಂಡನ ಹೆಸರು | ಃ | ರವಿ ಪೂಜಾರಿ |
| ಪ್ರಾಯ | ಃ | 36 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸ | ಃ | ಮರೂರು |

ದಿನಾಂಕಃ **12-11-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಆರೋಪಿತ ನನ್ನ ಗಂಡ. ಚಾಸಾ 2 ಮತ್ತು 3 ರವರ ಪರಿಚಯ ಅಷ್ಟಾಗಿ ಪರಿಚಯವಿರುವುದಿಲ್ಲ. ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ,

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿಃ 29-05-2016 ರಂದು ನಾನು ಆರೋಪಿ ಯೊಂದಿಗೆ ಗೋಳಿಯಂಗಡಿಗೆ ಹೋಗಿ ಅಲ್ಲಿಂದ ವಾಪಾಸು ಮರೂರಿಗೆ ಬೈಕ್ ನಲ್ಲಿ ಹೊರಟಿದಿದ್ದು ನಮ್ಮ ಮನೆಯ ಸಮೀಪ ಬರುತ್ತಿದ್ದಾಗ ಚಾಸಾ 3 ನಮ್ಮ ಎದುರಿನಲ್ಲಿ ಬರುತ್ತಿದ್ದು ಆ ಸಮಯದಲ್ಲಿ ಚಾಸಾ 1 ರವರು ಬೈಕ್ ನಲ್ಲಿ ಹೋಗುತ್ತಿದ್ದು ಆರೋಪಿ ಚಾಸಾ 1 ರವರು ಹೋಗುತ್ತಿದ್ದ ಮೊಟಾರು ಬೈಕ್ ನ್ನು ತಡೆ ಮಾಡಿ ಅವನ್ನು ಉದ್ದೇಶಿಸಿ ಕಣ್ಣು ಕಾಣಿಸುವುದಿಲ್ಲ ನನ್ನ ಮೈ ಮೇಲೆ ಬರುತ್ತೀಯಾ ಬೋಳಿ ಮಗನೆ ಬೇವರ್ಸಿ ನಾಯಿ ಮಗನೆ ನೀನು ಏನು ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಬೇಲಿಯ ಬಳಿ ಇದ್ದ ಗೂಟವನ್ನು ತೆಗೆದು ಚಾಸಾ 1 ರವರ ತಲೆಗೆ ಹೊಡೆದನು. ಚಾಸಾ 1 ರ ತಲೆಗೆ ರಕ್ತಗಾಯವಾಗಿ ಬೊಬ್ಬೆಹಾಕಿ ಅಷ್ಟರಲ್ಲಿ ಚಾಸಾ 2 ಮತ್ತು 3 ರವರು ಬಂದಾಗ ಆರೋಪಿ ನನ್ನ ಬೈಕ್ ನಲ್ಲಿ ಕೂರಿಸಿ

ಮನೆಗೆ ಕರೆದುಕೊಂಡು ಹೋದನು ಈ ವಿಚಾರವಾಗಿ ಚಾಸಾ 1 ರವರು ದೂರುಕೊಟ್ಟಿದ್ದು ನಾನು ನಿಪಿ-4 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನಿಜ ಇದ್ದು ಆರೋಪಿತನ ನನ್ನ ಗಂಡನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ಹಾಗೂ ನನ್ನ ಗಂಡನ ನಡುವೆ ಮನೆ ಕಟ್ಟುವ ವಿಚಾರದಲ್ಲಿ ಜಗಳ ವಿದ್ದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ರವರಿಂದ

(ಆರೋಪಿತರ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ